ಮಾಡಬೇಕೆಂದು ನಾನು ಈ ಸಭೆಯ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಾ ಇದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1979ರಲ್ಲಿ ಈ ಲ್ಯಾಂಪ್ಸ್ ಸೊಸೈಟಿಗಳನ್ನು ಸ್ಥಾಪಿಸಿರುವ ವಿವರ ಈ ಕೆಳಕಂಡಂತೆ ಇರುತ್ತದೆ. ಬಂಟ್ವಾಳ, ಬೆಳ್ತಂಗಡಿ, ಕುಂದಾಪುರ, ಕಾರ್ಕಳ, ಮಂಗಳೂರು, ಪುತ್ತೂರು, ಸುಳ್ಯ ಮತ್ತು ಉಡುಪಿ. ಒಟ್ಟು ಎಂಟು ಲ್ಯಾಂಪ್ಸ್ ಸಂಘಗಳನ್ನು ಸ್ಥಾಪಿಸಲಾಗಿದೆ. ಮಾನ್ಯ ಸದಸ್ಯರು ಎಲ್ಲ ಸಂಘಗಳೂ ನಷ್ಟದ ಎಂದು ಹೇಳುತ್ತಾರೆ. ಆದರೆ ಮಾತು ಸರಿಯಲ್ಲ. ಕೇವಲ ಒಂದು ಬಂಟ್ವಾಳ ಮತ್ತು ಕುಂದಾಪುರ ಈ ಎರಡು ಸಂಘಗಳು ಮಾತ್ರ ನಷ್ಟದಲ್ಲಿವೆ. ಉಳಿದ ಆರು ಸಂಘಗಳು ಲಾಭದಲ್ಲಿ ನಡೆಯುತ್ತಾ ಇವೆ. ಇನ್ನು ಅರಣ್ಯ ಇಲಾಖೆಯವರನ್ನು ಅಲ್ಲಿ ನೇಮಿಸಬೇಕೆಂದು ಹೇಳಿದ್ದಾರೆ. ಆದರೆ ಆ ಕುರಿತು ಅಲ್ಲಿಯ ಸೊಸೈಟಿಗಳು ಏನಾದರೂ ಕೇಳಿದರೆ ಅರಣ್ಯ ಇಲಾಖೆಯವರನ್ನು ನೇಮಿಸಿಕೊಳ್ಳುವುದಕ್ಕೆ ನಾವು ಪರವಾನಿಗಿಯನ್ನು ಕೊಡುತ್ತೇವೆ ಅಷ್ಟೇ ಅಲ್ಲ ಅದಕ್ಕಾಗಿ ಈಗಾಗಲೇ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ವರ್ಷ ನಾವು 274 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ, ಅವುಗಳನ್ನು ಲಾಭದಲ್ಲಿ ತರುವುದಕ್ಕೆ ಸಹಾಯಧನ ಕೊಡುತ್ತೇವೆ.

**(IV) "ಸಿ" ಮತ್ತು "ಡಿ" ನೌಕರರುಗಳ ಮಕ್ಕಳಿಗೆ ಮೀಸಲಾತಿ ಪಡೆಯಲು ಸಿಂಧುತ್ವ ಪ್ರಮಾಣ ಪತ್ರ ನೀಡುವ ಬಗ್ಗೆ**

ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್) : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದವರು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿ, ಅದರಲ್ಲಿ ಕೆನೆಪದರ ವರ್ಗಗಳಿಗೆ ಸರ್ಕಾರಿ, ಅರೆಸರ್ಕಾರಿ, ಕೇಂದ್ರ ಸರ್ಕಾರ ಮುಂತಾದ ಇಲಾಖೆಗಳಲ್ಲಿ ಕೆಲಸ ಮಾಡುವ ಸಿ ಮತ್ತು ಡಿ ಗುಂಪಿನ ನೌಕರರಿಗೂ ಆದಾಯಮಿತಿಯನ್ನು ಸಡಿಲಿಸಿ ಶೈಕ್ಷಣಿಕ ಸೌಲಭ್ಯವನ್ನು ಪಡೆಯಲು ಅವಕಾಶ ಮಾಡಿಕೊಟ್ಟಿರುವುದು ಅಭಿನಂದನೀಯ. ಇದರಿಂದಾಗಿ ಹಿಂದುಳಿದ ವರ್ಗಗಳು ಶೈಕ್ಷಣಿಕವಾಗಿ ಮುಂದೆ ಬರುವುದಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟ ಹಾಗೆ ಆಗಿದೆ. ಆದರೆ, ವೃತ್ತಿ ಶಿಕ್ಷಣ ಸೌಲಭ್ಯವನ್ನು ತಮ್ಮ ಮಕ್ಕಳಿಗೆ ಪಡೆಯುವ ಸಂದರ್ಭದಲ್ಲಿ ಸದರಿ ಸಿ ಮತ್ತು ಡಿ ಗುಂಪಿನ ನೌಕರರು ಬಹಳಷ್ಟು ವರ್ಷ ಕಾಲದವರೆಗೆ ಸೇವೆಯನ್ನು ಸಲ್ಲಿಸುವುದಕ್ಕೆ ಇರುವುದರಿಂದ ನಿಯಮಾನುಸಾರವಾಗಿ, ಸಹಜವಾಗಿ ಅವರ ಒಟ್ಟು ಸಂಬಳವು 50 ಸಾವಿರ ರೂಪಾಯಿಗಳನ್ನು ಮೀರಿರುವುದು ಸತ್ಯಸಂಗತಿಯಾಗಿರುತ್ತದೆ. ಈ ಕಾರಣವನ್ನು ಮುಂದಿಟ್ಟುಕೊಂಡು ಕೆಲವು ಜಿಲ್ಲೆಗಳಲ್ಲಿ ಕೆಲವು ಅಧಿಕಾರಿಗಳು ಸಿಂಧುತ್ವ ಪ್ರಮಾಣಪತ್ರವನ್ನು ನೀಡಲು ನಿರಾಕರಿಸುತ್ತಿರುವುದು ಮತ್ತು ಕೆಲವು ಜಿಲ್ಲೆಗಳಲ್ಲಿ ನೀಡಿರುವುದು ತಿಳಿದು ಬರುತ್ತದೆ. ಸರ್ಕಾರದ ಆದೇಶದಲ್ಲಿ ಸ್ಪಷ್ಟವಾಗಿರುವಂತೆ ಆದಾಯ ತೆರಿಗೆ ಪಾವತಿದಾರರಲ್ಲದ ಗೆಜೆಟೆಡ್ ಹುದ್ದೆಯಲ್ಲಿ ಇರದ ಎಲ್ಲಾ ಸಿ ಮತ್ತು ಡಿ ದರ್ಜೆಯ ನೌಕರರ ಒಟ್ಟು ಸಂಬಳವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಈ ಸೌಲಭ್ಯವನ್ನು ವಿಸ್ತರಿಸಬೇಕಾಗುತ್ತದೆ. ಪ್ರಸ್ತುತ ಈ ಕುರಿತು ಅಧಿಕಾರಿ ವರ್ಗದವರಲ್ಲಿ ಇರುವಂಥ ದ್ವಂದ್ವವನ್ನು ಹೋಗಲಾಡಿಸಿ ವೃತ್ತಿ ಶಿಕ್ಷಣಕ್ಕೆ ಮೀಸಲಾತಿಯನ್ನು ಪಡೆಯಬಯಸುವ ಅಭ್ಯರ್ಥಿಗಳಿಗೆ, ಅರ್ಜಿದಾರರಿಗೆ ಸಿಂಧುತ್ವ ಬಗ್ಗೆ ಪ್ರಮಾಣ ಪತ್ರವನ್ನು ಅವರಿಗೆ ಉಳಿದ ನಿಯಮಗಳು ಸರಿಯಾಗಿದ್ದ ಪಕ್ಷದಲ್ಲಿ ಕೂಡಲೇ ಕೊಡುವ ಬಗ್ಗೆ ತುರ್ತು ಆದೇಶವನ್ನು ನೀಡಿ ಹಿಂದುಳಿದ ವರ್ಗಗಳಿಗೆ ಆಗಿರುವ ಅನಾನುಕೂಲವನ್ನು ಇದು ಆಗದಂತೆ ನಿವಾರಿಸಬೇಕಾಗಿ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳನ್ನು ಈ ಮೂಲಕ ಗಮನ ಸೆಳೆದು ಪ್ರಾರ್ಥಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಮೇರೆಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಹೇಳಿಕೆಯನ್ನು ಓದುತ್ತೇನೆ.

ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಪ್ರಕಾರ, ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶ ಕುರಿತಂತೆ ಸರ್ಕಾರಿ ಮೀಸಲಾತಿ ಆದೇಶ ಸಂಖ್ಯೆ : ಸಕಇ 150 ಬಿಸಿಎ 94 ದಿನಾಂಕ 17-9-1994ನ್ನು ಹೊರಡಿಸಲಾಗಿದ್ದು, ಇದರನ್ವಯ, ಪ್ರವರ್ಗ-Iನ್ನು ಹೊರತುಪಡಿಸಿ, ಪ್ರವರ್ಗ -II(ಎ) II(ಬಿ), III(ಎ) ಮತ್ತು III(ಬಿ) ಇವುಗಳಲ್ಲಿ ನಮೂದಾಗಿರುವ ಜಾತಿಗಳ ಅಭ್ಯರ್ಥಿಗಳಿಗೆ ಈ ಕೆಳಕಂಡ ಷರತ್ತುಗಳನ್ನು ಅನ್ವಯಿಸಲಾಗಿದೆ:

1. ಅಭ್ಯರ್ಥಿ : ತಂದೆ-ತಾಯಿ : ಪೋಷಕರು ಸರ್ಕಾರದ ಒಂದನೇ ದರ್ಜೆಯ ಅಥವಾ ಎರಡನೆ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ, ಅಥವಾ ಖಾಸಗಿ ಕೈಗಾರಿಕೆ : ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೇ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ -(ವೇತನ ಶ್ರೇಣಿ ರೂ. 2050-3950);
2. ಅಭ್ಯರ್ಥಿ : ತಂದೆ - ತಾಯಿ: ಪೋಷಕರು ಆದಾಯ ತೆರಿಗೆ ಪಾವತಿದಾರರಾಗಿದ್ದರೆ;
3. ಅಭ್ಯರ್ಥಿ : ತಂದೆ-ತಾಯಿ; ಪೋಷಕರು ಮಾರಾಟ ತೆರಿಗೆ ಪಾವತಿದಾರರಾಗಿದ್ದರೆ;
4. ಅಭ್ಯರ್ಥಿ : ತಂದೆ-ತಾಯಿ; ಪೋಷಕರು ಇವರಲ್ಲಿ ಯಾರೊಬ್ಬರು ಅಥವಾ ಇಬ್ಬರೂ ಸೇರಿ 8 ಹೆಕ್ಟೇರ್ ಮಳೆಯಾಧಾರಿತ ಅಥವಾ ಒಣಭೂಮಿ ಅಥವಾ ತತ್ಸಮಾನವಾದ ಇತರೇ ಜಮೀನನ್ನು ಹೊಂದಿದ್ದರೆ;
5. ಅಭ್ಯರ್ಥಿ : ತಂದೆ-ತಾಯಿ; ಪೋಷಕರು ಸಂಪತ್ತು ತೆರಿಗೆ ಪಾವತಿದಾರರಾಗಿದ್ದಲ್ಲಿ;

ಮೇಲ್ಕಂಡ ಷರತ್ತುಗಳಿಗೆ ಒಳಪಡದೇ ಸಂಪತ್ತು ಇರುವವರು ಮಾತ್ರ ಮೀಸಲಾತಿಗೆ ಅರ್ಹತೆಯನ್ನು ಹೊಂದಿರುತ್ತಾರೆ. ಆದ ಕಾರಣ, ಸಂಬಂಧಪಟ್ಟ ಅಧಿಕಾರಿಗಳು ಅಂತಹವರಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುತ್ತಿರುವುದಿಲ್ಲ.

ಸರ್ಕಾರಿ ನೌಕರಿಗಳಲ್ಲಿರುವ ಸಿ ಮತ್ತು ಡಿ ಗುಂಪಿನ ನೌಕರರುಗಳು ಬಹಳಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಿರುವುದರಿಂದ ಅವರ ಸಂಬಳವು 50 ಸಾವಿರ ರೂ.ಗಳು ಮೀರಿರುವುದರಿಂದ, ಅವರು ಆದಾಯ ತೆರಿಗೆ ನಿರ್ಧರಣೆಗೆ ಒಳಪಡುತ್ತಾರೆ. ಆದ್ದರಿಂದ ಅವರ ಮಕ್ಕಳು ಮೀಸಲಾತಿಯನ್ನು ಪಡೆಯಲು ಅರ್ಹರಾಗುವುದಿಲ್ಲ. ಹಾಗೂ ಅವರಿಗೆ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಲು ಬರುವುದಿಲ್ಲ.

ಅಧ್ಯಕ್ಷರು : ರಾಮಲಿಂಗಾರೆಡ್ಡಿಯವರೇ, ಮಂತ್ರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನನ್ನ ಅನುಮತಿಯನ್ನು ಪಡೆದುಕೊಂಡು ಡೆಲ್ಲಿಗೆ ಹೋಗಿದ್ದಾರೆ. ಹೇಳಿಕೆಯನ್ನು ನಾನು ತಮಗೆ ತರಿಸಿಕೊಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಆಗಬಹುದು.

**(V) ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ಹೊಂಬಳ ಗ್ರಾಮದಲ್ಲಿ ಬಸ್ ನಿಲ್ದಾಣ**

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನಲ್ಲಿ ಹೊಂಬಳ ಒಂದು ದೊಡ್ಡ ಗ್ರಾಮ. ಇದು ಪಂಚಾಯತಿ ಕೇಂದ್ರ ಸ್ಥಾನವೂ ಹೌದು. ಈ ಗ್ರಾಮದಲ್ಲಿ ಬಸ್ ನಿಲ್ದಾಣ ಇಲ್ಲ. ಬಸ್ ನಿಲ್ದಾಣ ಆಗಬೇಕೆಂದು ಗ್ರಾಮಸ್ಥರ ಬೇಡಿಕೆಯಾಗಿದೆ. ಹಿಂದೆ ಸಾರಿಗೆ ಸಚಿವರಾಗಿದ್ದ ಮಾನ್ಯ ಅಜೀಜ್ ಸೇಠ್ ಅವರು ಕಾರ್ಯಕ್ರಮ ಒಂದರಲ್ಲಿ ಪಾಲ್ಗೊಳ್ಳಲು ಹೊಂಬಳ